ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **2296**

ಸದಸ್ಯರ ಹೆಸರು : ಶ್ರೀ ಎನ್.ಅಪ್ಪಾಜಿಗೌಡ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ: : **26.03.2021**

ಉತ್ತರಿಸುವ ಸಚಿವರು : ಕೃಷಿ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಮಣ್ಣಿನ ಫಲವತ್ತತೆಗೆ ಸಂಬಂಧಿಸಿದಂತೆ ಕೃಷಿ ಭೂಮಿ ಗರಿಷ್ಠ ಸಮಸ್ಯೆಯನ್ನು ಎದುರಿಸುತ್ತಿರುವ ಜಿಲ್ಲೆಗಳು ಯಾವುವು;</td><td>ಮಣ್ಣಿನ ಫಲವತ್ತತೆಗೆ ಸಂಬಂಧಿಸಿದಂತೆ ಕೃಷಿ ಭೂಮಿಯಲ್ಲಿ ಹೆಚ್ಚು ಆಮ್ಲೀಯ ಅಂಶವನ್ನು ಮತ್ತು ಹೆಚ್ಚು ಲವಣಾಂಶದ ಸವಾಲುಗಳನ್ನು ಎದುರಿಸುತ್ತಿರುವ ರಾಜ್ಯದ ಜಿಲ್ಲೆಗಳ ವಿವರಗಳು ಈ ಕೆಳಕಂಡಂತಿವೆ:
<table>
<tr><th>ಕ್ರ ಸಂ</th><th>ವಿವರ</th><th>ಜಿಲ್ಲೆಗಳು</th></tr>
<tr><td>1.</td><td>ಹೆಚ್ಚು ಆಮ್ಲೀಯ ಮಣ್ಣು (pH < 5.5)</td><td>ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ.</td></tr>
<tr><td>2.</td><td>ಹೆಚ್ಚು ಲವಣಾಂಶ ಮಣ್ಣು (pH > 8.5)</td><td>ಗದಗ, ವಿಜಯಪುರ, ಕೊಪ್ಪಳ, ಬೆಳಗಾವಿ ಮತ್ತು ಬಾಗಲಕೋಟೆ.</td></tr>
</table></td></tr>
<tr><td>(ಆ)</td><td>ಈ ಜಿಲ್ಲೆಗಳಲ್ಲಿ ಮಣ್ಣಿನ ಫಲವತ್ತತೆ ಬಗ್ಗೆ ಮಣ್ಣಿನ ಆರೋಗ್ಯ ಕಾರ್ಡ್ ಗಳನ್ನು ಎಷ್ಟು ಮಂದಿ ರೈತರಿಗೆ ವಿತರಿಸಲಾಗಿದೆ; ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)</td><td>ಈ ಜಿಲ್ಲೆಗಳಲ್ಲಿ ಒಟ್ಟು 25,30,150 ಲಕ್ಷ ಮಣ್ಣಿನ ಫಲವತ್ತತೆ ಕಾರ್ಡ್/ಮಣ್ಣಿನ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದ್ದು ಜಿಲ್ಲಾವಾರು, ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.</td></tr>
</table>

(ಇ) ಮಂಡ್ಯ ಜಿಲ್ಲೆಯಲ್ಲಿ ಸ್ಥಾಪಿಸಲಾದ ಮಣ್ಣಿನ ಪರೀಕ್ಷಾ ಪ್ರಯೋಗಾಲಯಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಮಂಡ್ಯ ಜಿಲ್ಲೆಯಲ್ಲಿ ಮೂರು ಸ್ಥಾನಿಕ ಮಣ್ಣು ಪರೀಕ್ಷಾ ಪ್ರಯೋಗಾಲಯಗಳು (ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ, ಮಂಡ್ಯ, ಕೃಷಿ ಕಾಲೇಜು, ಮಂಡ್ಯ) ಮತ್ತು ಒಂದು ಗ್ರಾಮಮಟ್ಟದ ಮಣ್ಣು ಪರೀಕ್ಷಾ ಪ್ರಯೋಗಾಲಯ ಸೇರಿದಂತೆ ಒಟ್ಟು ನಾಲ್ಕು ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನಲ್ಲಿ ಸ್ಥಾಪಿಸಲಾಗಿದೆ.

(ಈ) ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಮಣ್ಣಿನ ಪರೀಕ್ಷಾ ಆರೋಗ್ಯ ಕಾರ್ಡ್ ಗಳನ್ನು ಎಷ್ಟು ಮಂದಿ ರೈತರಿಗೆ ವಿತರಿಸಲಾಗಿದೆ; (ತಾಲ್ಲೂಕು ವಾರು ವಿವರ ನೀಡುವುದು.)

ಕಳೆದ ಮೂರು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಮಣ್ಣಿನ ಪರೀಕ್ಷ ಆಧಾರದ ಮೇರೆಗೆ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು 5,80,604 ರೈತರಿಗೆ ವಿತರಿಸಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ತಾಲ್ಲೂಕು	2017-18	2018-19	2019-20	ಒಟ್ಟು
ಮಂಡ್ಯ	38960	58441	1268	**98669**
ಮದ್ದೂರು	32413	48619	968	**82000**
ಮಳವಳ್ಳಿ	38931	58397	997	**98325**
ಶ್ರೀರಂಗಪಟ್ಟಣ	12790	19184	2505	**34479**
ಪಾಂಡವಪುರ	31369	47053	1050	**79472**
ಕೆ.ಆರ್.ಪೇಟೆ	42030	63046	1879	**106955**
ನಾಗಮಂಗಲ	31716	47575	1413	**80704**
ಒಟ್ಟು	**228209**	**342315**	**10080**	**580604**

(ಉ) ಈ ಜಿಲ್ಲೆಯಲ್ಲಿ ಸಂಚಾರಿ ಮಣ್ಣಿನ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆಯೇ; ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು; ಇಲ್ಲದಿದ್ದಲ್ಲಿ, ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ?

ಮಂಡ್ಯ ಜಿಲ್ಲೆಯಲ್ಲಿ ಸಂಚಾರಿ ಮಣ್ಣಿನ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿರುವುದಿಲ್ಲ. ಅವುಗಳನ್ನು ಸ್ಥಾಪಿಸುವ ಉದ್ದೇಶ ಸರ್ಕಾರ ಮುಂದೆ ಇರುವುದಿಲ್ಲ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯದ ಮೂಲಕ ಕೃಷಿ ಬೆಳೆಗಳಲ್ಲಿನ ಕೀಟ, ರೋಗ, ಕಳೆ, **ಸಸ್ಯ ಪೋಷಕಾಂಶಗಳ ಕೊರತೆ** ಮತ್ತಿತರ ತಾಂತ್ರಿಕ ಸಹಾಯವನ್ನು ಕ್ಷೇತ್ರ ಮಟ್ಟದಲ್ಲಿಯೇ ರೈತರಿಗೆ ಒದಗಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಸಂಖ್ಯೆ:-ಕೃಇ 64 ಕೃಕೈಉ 2021

(ಬಿ.ಸಿ.ಪಾಟೀಲ್)

ಕೃಷಿ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ

ಪ್ರಶ್ನೆ ಸಂಖ್ಯೆ:2296

ಅನುಬಂಧ-1

ಕ್ರ ಸಂ	ಜಿಲ್ಲೆ	ಮಣ್ಣು ಆರೋಗ್ಯ ಕಾರ್ಡ್ ಗಳನ್ನು ವಿತರಿಸಲಾದ ರೈತರ ಸಂಖ್ಯೆ
1	ಉಡುಪಿ	2,05,142
2	ಉತ್ತರ ಕನ್ನಡ	1,56,669
3	ಶಿವಮೊಗ್ಗ	2,14,077
4	ದಕ್ಷಿಣ ಕನ್ನಡ	1,57,582
5	ಕೊಡಗು	54,730
6	ಬೆಂಗಳೂರು ಗ್ರಾಮಾಂತರ	1,69,448
7	ಬೆಂಗಳೂರು ನಗರ	86,549
8	ಗದಗ	1,63,508
9	ವಿಜಯಪುರ	3,63,776
10	ಕೊಪ್ಪಳ	2,19,346
11	ಬೆಳಗಾವಿ	4,97,509
12	ಬಾಗಲಕೋಟೆ	2,41,814
ಒಟ್ಟು		**25,30,150**